ಸಾಕ್ಷಿಯನ್ನು ದಿನಾಂಕ 17-03-2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎನ್.ಡಿ. ವಕೀಲರಿಂದಃ**

ನಾನು ಪಿರ್ಯಾದಿದಾರ ಬ್ಯಾಂಕ್ ನಲ್ಲಿ ಮೇಲ್ವಿಚಾರಕ (ಸುಪರ್ ವೈಸರ್ ) ಆಗಿ ಕಳೆದ ಸುಮಾರು 12 ವರ್ಷಗಳಿಂದ ಕರ್ತವ್ಯವನ್ನು ಸಲ್ಲಿಸಿರುತ್ತೇನೆ. ನಾನು ಪಿರ್ಯಾದಿದಾರ ಬ್ಯಾಂಕ್‌ನಲ್ಲಿ ಮೇಲ್ವಿಚಾರಕನಾಗಿ ಕರ್ತವ್ಯವನ್ನು ಮಾಡುತ್ತಿದ್ದೇನೆ ಎಂಬುದರ ಕುರಿತು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ಪಿರ್ಯಾದಿದಾರ ಬ್ಯಾಂಕ್‌ನಲ್ಲಿ ನಾನು ಮೇಲ್ವಿಚಾರಕನೆಂದು ಹೇಳಲು ನಮ್ಮ ಪಿರ್ಯಾದಿದಾರ ಬ್ಯಾಂಕ್‌ನ ವ್ಯವಸ್ಥಾಪಕರು ದಾಖಲೆಯನ್ನು ನೀಡಿರುತ್ತಾರೆ. ಪಿರ್ಯಾದಿದಾರ ಬ್ಯಾಂಕ್‌ನವರು ನೀಡಿದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅಂತಹ ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸದ ಕಾರಣ ನನಗೆ ಆರೋಪಿಯ ವಿರುದ್ಧ ಚೆಕ್ ಅಮಾನ್ಯ ಪ್ರಕರಣವನ್ನು ದಾಖಲಿಸಲು ಹಾಗೂ ನನಗೆ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ಬ್ಯಾಂಕ್ ಸಹಕಾರಿ ಕಾಯಿದೆಯಡಿಯಲ್ಲಿ ನೋಂದಣಿಯಾಗಿರುತ್ತದೆ. ನಾನು ಈ ಪ್ರಕರಣದಲ್ಲಿ ಈ ದಿನ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ನಮ್ಮ ಪಿರ್ಯಾದಿದಾರ ಬ್ಯಾಂಕ್‌ನ ಆಡಳಿತ ಮಂಡಳಿಯಲ್ಲಿ ಯಾವುದೇ ನಿರ್ಣಯವಾಗಿದೆಯಾ ಎಂದರೆ ಸಾಕ್ಷಿಯು ಪಿರ್ಯಾದಿದಾರ ಬ್ಯಾಂಕ್ ನ ವ್ಯವಸ್ಥಾಪಕರ

ಅನುಪಸ್ಥಿತಿಯಲ್ಲಿ ನಾನು ಈ ಪ್ರಕರಣದಲ್ಲಿ ಹಾಜರಾಗಲು ಒಂದು ಪತ್ರವನ್ನು ಪಿರ್ಯಾದಿದಾರ ಬ್ಯಾಂಕ್‌ನಿಂದ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಆರೋಪಿಗೆ ಸಾಲವನ್ನು ನೀಡುವ ಸಮಯದಲ್ಲಿ ಪಿರ್ಯಾದಿದಾರ ಬ್ಯಾಂಕ್ ನ ಅಧ್ಯಕ್ಷರು ಪಿ.ಕೆ.ಉಮೇಶ್ ಹಾಗೂ ವ್ಯವಸ್ಥಾಪಕರು ಬಾಲಕೃಷ್ಣ ಬಿ. ಆಗಿದ್ದರು. ಆರೋಪಿಗೆ ಪಿರ್ಯಾದಿದಾರ ಬ್ಯಾಂಕ್‌ನಿಂದ ಸಾಲವನ್ನು ನೀಡುವ ಸಮಯದಲ್ಲಿ ಆರೋಪಿಯ ಆರ್ಥಿಕ ಹಿನ್ನಲೆಯ ಬಗ್ಗೆ ನಾವು ತಿಳಿದುಕೊಂಡಿರುತ್ತೇವೆ. ಆರೋಪಿಗೆ ಸಾಲವನ್ನು ನೀಡುವ ಸಮಯದಲ್ಲಿ ಪಿರ್ಯಾದಿದಾರ ಬ್ಯಾಂಕ್‌ನ ವ್ಯವಸ್ಥಾಪಕರು ಬಾಲಕೃಷ್ಣ ಬಿ. ಆಗಿದ್ದ ಕಾರಣ ಆರೋಪಿಯು ನಮ್ಮ ಪಿರ್ಯಾದಿದಾರ ಬ್ಯಾಂಕ್ ನಿಂದ ಪಡೆದುಕೊಂಡ ಸಾಲದ ಬಗ್ಗೆ ನನಗೆ ವೈಯಕ್ತಿಕ ಜ್ಞಾನ ಇದ್ದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಪಡೆದ ಸಾಲದ ಬಗ್ಗೆ ನನಗೆ ವೈಯಕ್ತಿಕ ಜ್ಞಾನ ಇದ್ದಿರುತ್ತದೆ.

ನಮ್ಮ ಪಿರ್ಯಾದಿದಾರ ಬ್ಯಾಂಕ್‌ನಲ್ಲಿ ಬೈಲಾವನ್ನು ಹೊಂದಿರುತ್ತೇವೆ. ಸದರಿ ಬೈಲಾದ ಪ್ರತಿಯನ್ನು ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿರುವುದಿಲ್ಲ. ಮುಂದಿನ ದಿನಾಂಕದಂದು ಸದರಿ ಬೈಲಾದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನ್ನ ಅಭ್ಯಂತರ ಇರುವುದಿಲ್ಲ. ಸದರಿ ಬೈಲಾದಲ್ಲಿ ಸಾಲ ನೀಡುವ ಬಗ್ಗೆ ಮೇಲಧಿಕಾರಿಯವರಿಗೆ ಪತ್ರ ಬರೆದ ಬಗ್ಗೆ, ನಾನು ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುವ

ಕುರಿತು ನಮೂದು ಇರುವ ಬಗ್ಗೆ ಬೈಲಾದಲ್ಲಿ ಹಾಗೆ ಇರುವ ವಿಚಾರಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ.

ನಾನು ಈ ಪ್ರಕರಣದಲ್ಲಿ ಪಿರ್ಯಾದಿದಾರ ಬ್ಯಾಂಕ್‌ನ ಪರವಾಗಿ ಪ್ರತಿನಿಧಿಸುತ್ತೇನೆಂದು ನಮ್ಮ ಪಿರ್ಯಾದಿಯಲ್ಲಾಗಲೀ, ನಮ್ಮ ನೋಟೀಸಲ್ಲಾಗಲೀ ನಮೂದಿಸಿರುವುದಿಲ್ಲ. ಆರೋಪಿಗೆ ನೋಟೀಸನ್ನು ನೀಡಲು ನಮ್ಮ ಪಿರ್ಯಾದಿದಾರ ಬ್ಯಾಂಕ್ ಶಾಖಾ ವ್ಯವಸ್ಥಾಪಕರು ನನಗೆ ಹೇಳಿರುತ್ತಾರೆ. ನಮ್ಮ ವ್ಯವಸ್ಥಾಪಕರು ನಮ್ಮ ವಕೀಲರಿಗೆ ಹೇಳಿ ಸದರಿ ನೋಟೀಸನ್ನು ಆರೋಪಿಗೆ ಜ್ಯಾರಿ ಮಾಡಿರುತ್ತಾರೆ.

ಈ ಪಿರ್ಯಾದಿಯನ್ನು ದಾಖಲಿಸುವ ಪೂರ್ವದಲ್ಲಿ 4-5 ಬಾರಿ ನಮ್ಮ ಪಿರ್ಯಾದಿದಾರ ಬ್ಯಾಂಕ್‌ನಿಂದ ಆರೋಪಿಗೆ ನೋಟೀಸನ್ನು ನೀಡಿರುತ್ತೇವೆ. ಯಾವ-ಯಾವ ದಿನಾಂಕಗಳಂದು ಆರೋಪಿಗೆ ನಮ್ಮ ಪಿರ್ಯಾದಿದಾರ ಬ್ಯಾಂಕ್ ನಿಂದ ನೋಟೀಸನ್ನು ನೀಡಿರುತ್ತೇವೆ ಎಂದು ನಮ್ಮ ಪಿರ್ಯಾದಿದಾರ ಬ್ಯಾಂಕ್ ನಲ್ಲಿ ದಾಖಲೆಗಳು ಇದ್ದಿರುವುದಿಲ್ಲ. ಸದರಿ ಪ್ರಕರಣವನ್ನು ಹೂಡುವ ಪೂರ್ವದಲ್ಲಿ ಆರೋಪಿಗೆ 4-5 ಬಾರಿ ನೋಟೀಸನ್ನು ನೀಡಿರುತ್ತೇವೆಂದು ನಮ್ಮ ಪಿರ್ಯಾದಿಯಲ್ಲಿ ಕಾಣಿಸಿರುವುದಿಲ್ಲ.

ಪ್ರಸ್ತುತ ಪ್ರಕರಣದಲ್ಲಿ ನಾವು ಜಾಮೀನುದಾರರನ್ನು ಪಡೆದುಕೊಂಡಿರುವುದಿಲ್ಲ, ಆದರೆ ಸಾಕ್ಷಿಯಾಗಿ ಇಬ್ಬರು ಸಾಕ್ಷಿದಾರರನ್ನು ಪಡೆದುಕೊಂಡಿರುತ್ತೇವೆ. ಸದರಿ ಇಬ್ಬರು ಸಾಕ್ಷಿದಾರರ ಹೆಸರನ್ನು ನಮ್ಮ ಪಿರ್ಯಾದಿದಾರ ಬ್ಯಾಂಕ್ ನಿಂದ ಹೂಡಿದ

ಪಿರ್ಯಾದಿಯಲ್ಲಿ ನಮೂದು ಮಾಡಿರುವುದಿಲ್ಲ ಹಾಗೂ ಸದರಿ ಇಬ್ಬರು ಸಾಕ್ಷಿದಾರರಿಗೆ ನಮ್ಮ ಪಿರ್ಯಾದಿದಾರ ಬ್ಯಾಂಕ್ ನಿಂದ ನೋಟೀಸನ್ನು ಕೂಡಾ ಜ್ಯಾರಿ ಮಾಡಿರುವುದಿಲ್ಲ.

ನಮ್ಮ ಪಿರ್ಯಾದಿದಾರ ಬ್ಯಾಂಕ್ ನಿಂದ ಆರೋಪಿಗೆ ಸಾಲವನ್ನು ನೀಡುವ ಸಮಯದಲ್ಲಿ ಆರೋಪಿಯಿಂದ ವಿಭಾಗ ಪತ್ರ, ಪಹಣಿ, ಮ್ಯುಟೇಷನ್ ರಿಜಿಸ್ಟರ್, ತೀರ್ವೆ, ಖಾತೆ, ಸಂತತಿ ನಕ್ಷೆ , ನಿರಾಕ್ಷೇಪಣಾ ಪತ್ರ, ನಕ್ಷೆ, ಪ್ಲ್ಯಾನ್ ಆ್ಯಂಡ್ ಎಸ್ಟಿಮೇಷನ್ ದಾಖಲೆಗಳನ್ನು ಪಡೆದುಕೊಂಡಿರುತ್ತೇವೆ. ಆರೋಪಿಯು ನಮ್ಮ ಪಿರ್ಯಾದಿದಾರ ಬ್ಯಾಂಕ್‌ನಿಂದ ಕೃಷಿ ಅಭಿವೃದ್ಧಿಗಾಗಿ ಸಾಲವನ್ನು ಪಡೆದುಕೊಂಡಿರುತ್ತಾರೆ.

ನಮ್ಮ ಪಿರ್ಯಾದಿದಾರ ಬ್ಯಾಂಕ್ ನಿಂದ ಸಾಲವನ್ನು ಪಡೆದುಕೊಳ್ಳಬೇಕಾದರೆ ನಮ್ಮ ಬ್ಯಾಂಕ್ ನಲ್ಲಿ ಸದಸ್ಯತ್ವವನ್ನು ಹೊಂದಿರಬೇಕು ಎಂದರೆ ಸರಿ. ಆರೋಪಿಯು ಪಡೆದ ಸಾಲದ ಇಬ್ಬರು ಸಾಕ್ಷಿದಾರರುಗಳು ನಮ್ಮ ಪಿರ್ಯಾದಿದಾರ ಬ್ಯಾಂಕ್‌ನಲ್ಲಿ ಸದಸ್ಯತ್ವವನ್ನು ಹೊಂದಿರುತ್ತಾರೆ. ಆರೋಪಿಯು ಯಾವ ದಿನಾಂಕದಂದು ನಮ್ಮ ಪಿರ್ಯಾದಿದಾರ ಬ್ಯಾಂಕ್ ನ ಸದಸ್ಯತ್ವವನ್ನು ಹೊಂದಿದ್ದರು ಎಂದು ನಮ್ಮ ಬ್ಯಾಂಕ್ ನ ದಾಖಲೆಗಳಲ್ಲಿ ನಮೂದು ಇರುತ್ತದೆ ಎಂದರೆ ಸರಿ. ನಮ್ಮ ಪಿರ್ಯಾದಿದಾರ ಬ್ಯಾಂಕ್‌ನಲ್ಲಿ ಸದಸ್ಯತ್ವವನ್ನು ಹೊಂದಿರಬೇಕಾದರೆ ಆ ಬಾಬ್ತು ನಮ್ಮ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಣಯವಾಗಬೇಕು ಎಂದರೆ ಸರಿ. ಸದರಿ ನಿರ್ಣಯದ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹಾಗೆ ಮುಂದಿನ ದಿನಾಂಕದಂದು ಸದರಿ ನಿರ್ಣಯದ ಪ್ರತಿಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

ಆರೋಪಿಯ ಸಾಲಕ್ಕೆ ಸಂಬಂಧಪಟ್ಟಂತೆ ಎಲ್ಲಾ ledger extract ಗಳು ನಮ್ಮ ಪಿರ್ಯಾದಿದಾರ ಬ್ಯಾಂಕ್ ನಲ್ಲಿ ಇರುತ್ತವೆ ಎಂದರೆ ಸರಿ. ಹಾಗೂ ಆರೋಪಿಗೆ ಸಾಲ ನೀಡಿದ ಬಾಬ್ತು ಕ್ಯಾಶ್ ಬುಕ್ ನಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಸದರಿ ledger extract ಹಾಗೂ ಕ್ಯಾಶ್ ಬುಕ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

ನಮ್ಮ ಪಿರ್ಯಾದಿದಾರ ಬ್ಯಾಂಕ್‌ನ ಸಿ.ಇ.ಒ. ಹಾಗೂ ಕಾರ್ಯದರ್ಶಿಯರಿಗಲ್ಲದೇ ಉಳಿದ ಯಾವುದೇ ಸ್ಥಾನದ ಸಿಬ್ಬಂದಿಗಳಿಗೆ ಯಾರಿಗೂ ಪಿರ್ಯಾದಿದಾರ ಬ್ಯಾಂಕ್ ನ ಪರವಾಗಿ ಪ್ರತಿನಿಧಿಸಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

**ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಮೇರೆಗೆ ಕಾಲಾವಕಾಶ ನೀಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓ.ಹೇ.ಕೇ.ಸ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸುಳ್ಯ.ದ.ಕ.